# ಐದು 'ಆಸ್ಕರ್' ಮುತ್ತುಗಳು

ಬೆಂಗಳೂರು ಚಿತ್ರೋತ್ಸವದಲ್ಲಿ ಈ ಸಲ (2018) ನೂರಾರು ಅತ್ಯುತ್ತಮ ಚಿತ್ರಗಳ ಪ್ರದರ್ಶನ ನಡೆಯಲಿದೆ. ಅದರಲ್ಲಿ ಈ ಐದು 'ಆಸ್ಕರ್' ಮುತ್ತುಗಳನ್ನು ವಿಶೇಷವಾಗಿ ಗಮನಿಸಬಹುದು.

■ ಬಿ.ಎಂ. ಹನೀಫ್

'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್' ಪ್ರಶಸ್ತಿಗಳನ್ನು ನಾವು ಎಷ್ಟೇ ದೂರಿದರೂ, ಜಗತ್ತಿನ ಅತ್ಯುತ್ತಮ ಸಿನಿಮಾಗಳನ್ನು ಅದು ಪ್ರಶಸ್ತಿಯ ರೂಪದಲ್ಲಿ ನಮ್ಮ ಮುಂದಿಡುವುದು ಸುಳ್ಳಲ್ಲ. 'ಆಸ್ಕರ್' ಪ್ರಶಸ್ತಿ ಎಂದೇ ಜನಪ್ರಿಯಗೊಂಡಿರುವ ಈ ಅಕಾಡೆಮಿ ಪ್ರಶಸ್ತಿ ಪ್ರತಿವರ್ಷ ಯಾರ ಮುಡಿಗೇರುತ್ತದೆ ಎನ್ನುವುದನ್ನು ಕಾತರದಿಂದ ಕಾಯುವ ದೊಡ್ಡದೊಂದು ಪ್ರೇಕ್ಷಕ ವರ್ಗವೇ ಜಗತ್ತಿನಾದ್ಯಂತ ಹರಡಿದೆ. ಎಷ್ಟೋ ಸಲ ಜ್ಯೂರಿಗಳ ತೀರ್ಮಾನ ಸರಿಯಲ್ಲ; ಭಾರತೀಯ ಅಥವಾ ಏಷ್ಯಾದ ಸಿನಿಮಾಗಳನ್ನು ನೋಡುವ ಕ್ರಮವೇ ಈ ಜ್ಯೂರಿಗಳಿಗೆ ಗೊತ್ತಿಲ್ಲ ಎನ್ನಿಸಿದರೂ, ಪ್ರಶಸ್ತಿಗೆ ಆಯ್ಕೆಯಾದ ಸಿನಿಮಾಗಳ ಮಹತ್ವವನ್ನು ಕಡೆಗಣಿಸಲು ಆಗುವುದಿಲ್ಲ. ಅದಕ್ಕೆಂದೇ ಜಗತ್ತಿನ ಅತ್ಯಂತ ಸೃಜನಶೀಲ ನಿರ್ದೇಶಕರೆಲ್ಲರೂ ತಮ್ಮದೊಂದು ಸಿನಿಮಾಕ್ಕೆ 'ಆಸ್ಕರ್' ಪ್ರಶಸ್ತಿ ಲಭಿಸಬೇಕು ಎಂದು ಕನಸು ಕಂಡಿರುತ್ತಾರೆ.

2017ರ ಜಗತ್ತಿನ ಅತ್ಯುತ್ತಮ ಸಿನಿಮಾಗಳ ಆಯ್ಕೆಯನ್ನು ಪ್ರಕಟಿಸುವ ಪ್ರತಿಷ್ಠಿತ ಅಕಾಡೆಮಿ ಪ್ರಶಸ್ತಿ ಸಮಾರಂಭ ಮಾರ್ಚ್ 4ರಂದು ಹಾಲಿವುಡ್‌ನ ಡಾಲ್ಬಿ ಥಿಯೇಟರ್‌ನಲ್ಲಿ ನಡೆಯಲಿದೆ. ಅದಕ್ಕೂ ಮುನ್ನ, ಬೆಂಗಳೂರು ಚಿತ್ರೋತ್ಸವವು, ಆಸ್ಕರ್ ಪ್ರಶಸ್ತಿಯ ವಿದೇಶಿ ವಿಭಾಗದಲ್ಲಿ ಅಂತಿಮ ಸುತ್ತು ಪ್ರವೇಶಿಸಿ ಸ್ಪರ್ಧೆಯಲ್ಲಿರುವ ಐದು ಸಿನಿಮಾಗಳನ್ನು ಒಂದೇ ಕಡೆ ಪ್ರದರ್ಶಿಸಲಿದೆ. ಹತ್ತನೇ ವರ್ಷಕ್ಕೆ ಕಾಲಿಟ್ಟಿರುವ ಬೆಂಗಳೂರು ಚಿತ್ರೋತ್ಸವಕ್ಕೆ ಇದು ಮಹತ್ವದ ಸಂಗತಿಯೂ ಹೌದು. ದಿ ಇನ್‌ಸಲ್ಟ್ (ಲೆಬನಾನ್), ದಿ ಸ್ಕ್ವೇರ್ (ಸ್ವೀಡನ್), ಲವ್‌ಲೆಸ್ (ರಷ್ಯಾ), ಎ ಫ್ಯಾಂಟಾಸ್ಟಿಕ್ ವುಮನ್ (ಚಿಲಿ) ಮತ್ತು ಆನ್ ಬಾಡಿ ಆ್ಯಂಡ್ ಸೋಲ್ (ಹಂಗೆರಿ) ಈ ಐದು ಚಿತ್ರಗಳು.

ಈ ಐದೂ ಸಿನಿಮಾಗಳು ವಿದೇಶ ವಿಭಾಗದ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ತೀವ್ರ ಪೈಪೋಟಿ ನೀಡುತ್ತಿವೆ. ಈಗಾಗಲೆ ಯೂರೋಪಿನ ವಿವಿಧ ಸ್ಥಳಗಳಲ್ಲಿ ನಡೆದಿರುವ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಈ ಐದೂ ಸಿನಿಮಾಗಳು ಒಂದಲ್ಲ ಒಂದು ಪ್ರಶಸ್ತಿ ಗೆದ್ದಿವೆ. 'ದಿ ಸ್ಕ್ವೇರ್' ಕೇನ್ಸ್ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರವೆಂದು ಪ್ರಶಸ್ತಿ ಗಳಿಸಿದ್ದರೆ, 'ಲವ್‌ಲೆಸ್' ಅದೇ ಚಿತ್ರೋತ್ಸವದಲ್ಲಿ ಜ್ಯೂರಿ ಪ್ರಶಸ್ತಿ ಗಳಿಸಿದೆ. ಬರ್ಲಿನ್ ಚಿತ್ರೋತ್ಸವದಲ್ಲಿ 'ಆನ್ ಬಾಡಿ ಆ್ಯಂಡ್ ಸೋಲ್' ಅತ್ಯುತ್ತಮ ಚಿತ್ರ ಪ್ರಶಸ್ತಿ ಗಳಿಸಿದ್ದರೆ, ಅಲ್ಲೇ 'ಎ ಫ್ಯಾಂಟಾಸ್ಟಿಕ್ ವುಮನ್' ಅತ್ಯುತ್ತಮ ಚಿತ್ರಕಥೆಗಾಗಿ ಪ್ರಶಸ್ತಿ ಪಡೆದಿದೆ. 'ದಿ ಇನ್‌ಸಲ್ಟ್' ಚಿತ್ರದ ನಟನೆಗಾಗಿ ಕಮೆಲ್ ಅಲ್ ಬಶ್ರಾ ವೆನಿಸ್ ಚಿತ್ರೋತ್ಸವದಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಹಾಗಾಗಿ ಆಸ್ಕರ್ ಪ್ರಶಸ್ತಿಯ ಬಗ್ಗೆ ಸಿನಿಮಾಪ್ರೇಮಿಗಳ ಕುತೂಹಲ ಸಹಜವಾಗಿಯೇ ಕೆರಳಿದೆ.

ಈ ಹಿನ್ನೆಲೆಯಲ್ಲಿ ಐದೂ ಸಿನಿಮಾಗಳ ಕುರಿತ ಸಂಕ್ಷಿಪ್ತ ನೋಟವೊಂದು ಇಲ್ಲಿದೆ.



## ದಿ ಇನ್‌ಸಲ್ಟ್

ಬಹಳ ಸಲ ಹೀಗಾಗುತ್ತದೆ– ಒಂದು ಸಣ್ಣ ಜಗಳ, ವೈಯಕ್ತಿಕವಾಗಿ ಶುರುವಾಗಿ, ಬೆಳೆಬೆಳೆದು ಅಂತರರಾಷ್ಟ್ರೀಯ ಮಟ್ಟಕ್ಕೆ ಮುಟ್ಟುತ್ತದೆ. ಜಗಳ ಮಾಡಬಾರದೆಂಬುದು ಮನಸ್ಸಿನಲ್ಲಿದ್ದರೂ ಮಾತಿಗೆ ಮಾತು ಬೆಳೆದು, ಅದಕ್ಕೆ ನಮ್ಮ ಹಳೆಯ ಪೂರ್ವಾಗ್ರಹಗಳೆಲ್ಲ ಕುಮ್ಮಕ್ಕು ಕೊಟ್ಟು ಕೊನೆಗೆ ಅದು ಕೊನೆಯಿಲ್ಲದ ಜಗಳವಾಗಿ ಮಾರ್ಪಡುತ್ತದೆ. ಜಗಳದ ಸಮಯದಲ್ಲಿ ಹಳೆಯ ಕಹಿಯ ಒಗರುಗಳೆಲ್ಲ ಮೇಲೆದ್ದು ಮಾತುಗಳ ರೂಪದಲ್ಲಿ ಪೂತ್ಕರಿಸುತ್ತದೆ. ಲೆಬನೀಸ್ ಭಾಷೆಯ 'ದಿ ಇನ್ಸಲ್ಟ್' ಸಿನಿಮಾದ ಕಥೆಯೂ ಹೀಗೆಯೇ ಇದೆ.

ಲೆಬನೀಸ್ ಕ್ರಿಶ್ಚಿಯನ್ ಟೋನಿ ತನ್ನ ಬಾಲ್ಕನಿಯಲ್ಲಿ ಡ್ರೈನೇಜ್ ಪೈಪ್‌ಲೈನ್ ದುರಸ್ತಿ ಮಾಡುತ್ತಿದ್ದಾಗ ಅದರ ನೀರು ಹನಿ ಹನಿಯಾಗಿ ಕೆಳಗೆ ಬಿದ್ದು, ಕೆಳಗಿನ ಮನೆಯ ಪ್ಯಾಲಸ್ತೀನ್ ನಿರಾಶ್ರಿತ ಯಾಸೆರ್‌ನ ಪಿತ್ತ ಕೆದರುತ್ತದೆ. ಇಬ್ಬರ ಮಧ್ಯೆ ಇದೇ ವಿಷಯದಲ್ಲಿ ಜಗಳ ಶುರುವಾಗುತ್ತದೆ. ಮಾತಿಗೆ ಮಾತು ಬೆಳೆದು ಹೊಡೆದಾಡಿಕೊಳ್ಳುತ್ತದೆ. ವಿಷಯ ಕೋರ್ಟ್ ಮೆಟ್ಟಿಲೇರುತ್ತದೆ. ಕೋರ್ಟ್–ರೂಮ್‌ನಲ್ಲಿ ನಡೆಯುವ ಡ್ರಾಮಾ, ಎರಡು ಸಮುದಾಯಗಳ, ಎರಡು ರಾಜಕೀಯ ಬಣಗಳ ನಡುವಣ ಕದನವಾಗಿ ಮಾರ್ಪಡುತ್ತದೆ. ದೇಶದ ಗಮನ ಸೆಳೆಯುತ್ತದೆ. 15 ವರ್ಷಗಳ ಕಾಲ ಅಂತರ್ಯುದ್ಧದಿಂದ ಬಸವಳಿದು ಬಳಿಕ ಶಾಂತಿ ಸ್ಥಾಪನೆಯಾದ ದೇಶ ಲೆಬನಾನ್. ಈ ಕೋರ್ಟ್ ರೂಮ್ ಡ್ರಾಮಾ–ದಲ್ಲಿ ಹಳೆಯ ರೋಷಗಳೆಲ್ಲ ಮೇಲೇಳುತ್ತವೆ. ವ್ಯಕ್ತಿಗಾದ ಅವಮಾನ ಏಕ–ಕಾಲದಲ್ಲಿ ರಾಜಕೀಯ ಅವಮಾನವೂ ಆಗುವ ಪರಿ ಬೆರಗು ಹುಟ್ಟಿಸುತ್ತದೆ.

ಆಸ್ಕರ್‌ಗೆ ನಾಮಕರಣವಾದ ಮೊದಲ ಲೆಬನೀಸ್ ಸಿನಿಮಾವಿದು. ಚಿತ್ರದ ನಿರ್ದೇಶಕ ಝಿಯಾದ್ ಡೊವೀರಿ, ಈ ಹಿಂದೆ 'ವೆಸ್ಟ್ ಬೆರೂತ್' ಮತ್ತು 'ದಿ ಅಟ್ಯಾಕ್' ಎನ್ನುವ ಸಿನಿಮಾಗಳ ಮೂಲಕ ಗಮನ ಸೆಳೆದಾತ. 2013ರಲ್ಲಿ 'ದಿ ಅಟ್ಯಾಕ್' ಸಿನಿಮಾವನ್ನು ಇಸ್ರೇಲ್‌ನ ನೆಲದಲ್ಲಿ ಶೂಟಿಂಗ್ ಮಾಡಿದ್ದಕ್ಕೆ ಪೊಲೀಸರು ಈತನನ್ನು ಇತ್ತೀಚೆಗೆ ಬಂಧಿಸಿದ್ದರು. ವಿದೇಶೀ ನೆಲದಲ್ಲಿ ಕಾಲಿಡುವುದು ಲೆಬನಾನ್ ಕಾಯ್ದೆಯ ಪ್ರಕಾರ ಅಪರಾಧ. ಆದರೆ ಮಾನವ ಹಕ್ಕು ಕಾರ್ಯಕರ್ತರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಮರುದಿನವೇ (ಯಾವ ಆರೋಪಪಟ್ಟಿಯೂ ಇಲ್ಲದೆ) ಆತನನ್ನು ಬಿಡುಗಡೆ ಮಾಡಲಾಗಿತ್ತು.